## ಕರ್ನಾಟಕ ವಿಧಾನ ಪರಿಷತ್ತು

(147ನೇ ಅಧಿವೇಶನ)

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **1006** |
| **ಸದಸ್ಯರ ಹೆಸರು** | : | **ಎಸ್ ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| **ಉತ್ತರಿಸ ಬೇಕಾದ ದಿನಾಂಕ** | : | **22.09.2022** |
| **ಉತ್ತರಿಸುವವರು** | : | **ಸನ್ಮಾನ್ಯ ಮುಖ್ಯಮಂತ್ರಿಗಳು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯಾದ್ಯಂತ ಶ್ರೀಗಂಧದ ಮರಗಳ ಕಳ್ಳತನದ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು: ಎಷ್ಟು ಪ್ರಕರಣಗಳನ್ನು ಕಳೆದ 5 ವರ್ಷಗಳಲ್ಲಿ ದಾಖಲಿಸಲಾಗಿದೆ; ದಾಖಲಾದ ಪ್ರಕರಣಗಳಲ್ಲಿ ಎಷ್ಟು ಜನರಿಗೆ ಶಿಕ್ಷೆಯಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಹೌದು.<br>ಇಂತಹ ಪ್ರಕರಣಗಳನ್ನು ತಡೆಗಟ್ಟಲು ಇಲಾಖಾ ಸಿಬ್ಬಂದಿಯ ನಿರಂತರ ಗಸ್ತುಕಾರ್ಯ, ಶ್ರೀಗಂಧ ನೆಡುತೋಪಿನ ಸುತ್ತಾ ಬೇಲಿ ನಿರ್ಮಾಣ, ತಡೆಗೋಡೆ ನಿರ್ಮಾಣ ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಕಳ್ಳ ಬೇಟೆ ತಡೆ ಶಿಬಿರ ಸ್ಥಾಪಿಸಿ ಕಾವಲುಗಾರರನ್ನು ನೇಮಿಸಿ ಕಳ್ಳತನ ಪ್ರಕರಣಗಳು ನಡೆಯದಂತೆ ಕ್ರಮ ಕೈಗೊಳ್ಳಲಾಗುತ್ತಿದೆ.<br>ಕಳೆದ 5 ವರ್ಷಗಳಲ್ಲಿ ದಾಖಲಾಗಿರುವ ಶ್ರೀಗಂಧದ ಮರಗಳ ಕಳ್ಳತನದ ಪ್ರಕರಣಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ.<br>ಮುಂದುವರೆದು, ಶ್ರೀಗಂಧದ ಮರಗಳ ಕಳ್ಳತನ ಮಾಡುವ ಆರೋಪಿಗಳನ್ನು ಪತ್ತೆಹಚ್ಚಿ ಕರ್ನಾಟಕ ಅರಣ್ಯ ಅಧಿನಿಯಮ,1963 ಮತ್ತು ಕರ್ನಾಟಕ ಅರಣ್ಯ ನಿಯಮಗಳು, 1969ರ ಪ್ರಕಾರ ಮೊಕದ್ದಮೆಯನ್ನು ದಾಖಲಿಸಿ, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ, ಅವರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿ, ಆರೋಪಿಗಳಿಗೆ ಶಿಕ್ಷೆಯಾಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ. ಇಂತಹ ಕಳ್ಳತನದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಆರೋಪಿತರು ಪತ್ತೆಯಾಗಿರುವ ಪ್ರಕರಣಗಳಲ್ಲಿ ಸಂಬಂಧಿಸಿದ ಜಿಲ್ಲೆಗಳ ಮಾನ್ಯ ನ್ಯಾಯಾಲಯದಲ್ಲಿ ವಿಚಾರಣೆಯ ವಿವಿಧ ಹಂತಗಳಲ್ಲಿರುತ್ತದೆ. |
| ಆ) | ಧಾರವಾಡದಲ್ಲಿ ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಶ್ರೀಗಂಧ ಕೋಟೆಯಲ್ಲಿ ಶ್ರೀಗಂಧದ ಮರಗಳ ಕಳ್ಳತನವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಧಾರವಾಡ ಕೇಂದ್ರಿಯ ಶ್ರೀಗಂಧ ಕೋಠಿಯಲ್ಲಿ ಮರಗಳು ಕಳ್ಳತನವಾಗಿರುವುದರ ಬಗ್ಗೆ ಯಾವುದೇ ಪ್ರಕರಣಗಳು ದಾಖಲೆಯಾಗಿರುವುದಿಲ್ಲ. |

ಸಂಖ್ಯೆ: ಅಪಜೀ 51 ಎಫ್‌ಡಿಪಿ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

ಅನುಬಂಧ

## ಎಲ್ ಸಿ.ಕ್ಯೂ 1040 (1006) ರ ಜಿಲ್ಲಾವಾರು ದಾಖಲಾದ ಶ್ರೀಗಂಧ ಪ್ರಕರಣಗಳ ವಿವರ

| ಕ್ರ. ಸಂ | ಜಿಲ್ಲೆಯ ಹೆಸರು | 2017-18 | 2018-19 | 2019-20 | 2020-2021 | 2021-22 |
|---|---|---|---|---|---|---|
| 1 | ಬೆಂಗಳೂರು ನಗರ | 11 | 10 | 14 | 13 | 3 |
| 2 | ಬೆಂಗಳೂರು ಗ್ರಾಮಾಂತರ | 1 | 2 | 0 | 5 | 2 |
| 3 | ಕೋಲಾರ | 0 | 0 | 22 | 0 | 0 |
| 4 | ರಾಮನಗರ | 3 | 5 | 4 | 4 | 2 |
| 5 | ಚಿಕ್ಕಬಳ್ಳಾಪುರ | 6 | 11 | 8 | 4 | 7 |
| 6 | ಬಳ್ಳಾರಿ | 4 | 2 | 1 | 2 | 4 |
| 7 | ಬೀದರ್ | 0 | 0 | 0 | 0 | 0 |
| 8 | ಕಲಬುರಗಿ | 0 | 0 | 0 | 0 | 0 |
| 9 | ರಾಯಚೂರು | 0 | 0 | 0 | 0 | 0 |
| 10 | ಯಾದಗಿರಿ | 0 | 0 | 0 | 0 | 0 |
| 11 | ಚಿತ್ರದುರ್ಗ | 1 | 3 | 2 | 1 | 2 |
| 12 | ದಾವಣಗೆರೆ | 2 | 8 | 9 | 3 | 9 |
| 13 | ಕೊಪ್ಪಳ | 2 | 1 | 0 | 2 | 1 |
| 14 | ಚಾಮರಾಜನಗರ | 5 | 7 | 14 | 21 | 10 |
| 15 | ಚಿಕ್ಕಮಗಳೂರು | 25 | 27 | 23 | 28 | 22 |
| 16 | ಹಾಸನ | 19 | 17 | 26 | 33 | 8 |
| 17 | ತುಮಕೂರು | 2 | 5 | 7 | 12 | 9 |
| 18 | ಉತ್ತರ ಕನ್ನಡ | 17 | 19 | 19 | 17 | 5 |
| 19 | ಶಿವಮೊಗ್ಗ | 28 | 25 | 30 | 19 | 45 |
| 20 | ಕೊಡಗು ಜಿಲ್ಲೆ | 7 | 10 | 21 | 18 | 9 |
| 21 | ದಕ್ಷಿಣ ಕನ್ನಡ | 3 | 2 | 3 | 2 | 2 |
| 22 | ಉಡುಪಿ | 0 | 0 | 1 | 0 | 2 |
| 23 | ಮೈಸೂರು | 11 | 20 | 17 | 23 | 23 |
| 24 | ಮಂಡ್ಯ | 3 | 8 | 4 | 5 | 11 |
| 25 | ಬೆಳಗಾವಿ | 8 | 4 | 6 | 8 | 13 |
| 26 | ಬಾಗಲಕೋಟೆ | 5 | 3 | 0 | 9 | 4 |
| 27 | ವಿಜಯಪುರ | 3 | 5 | 11 | 2 | 3 |
| 28 | ಹಾವೇರಿ | 0 | 0 | 0 | 0 | 0 |
| 29 | ಧಾರವಾಡ | 1 | 7 | 8 | 16 | 22 |
| 30 | ಗದಗ | 0 | 0 | 0 | 2 | 0 |
| | ಒಟ್ಟು | 167 | 201 | 250 | 249 | 218 |

Hemant 2/9

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಕಾನೂನು ಕೋಶ)